


## ಹೀಗೊಂದು ಜೋಕ್...

'ಗ್ಲೋಬಲ್ ಎನ್‌ಸಿಎಪಿ' ಭಾರತೀಯ ಕಾರುಗಳನ್ನು ಮೊದಲ ಬಾರಿ ಕ್ರಾಶ್ ಟೆಸ್ಟ್‌ಗೆ ಒಳಪಡಿಸಿದಾಗ ಒಂದು ಜೋಕ್ ಪ್ರಚಲಿತಕ್ಕೆ ಬಂದಿತ್ತು. ಸಾಮಾಜಿಕ ಜಾಲತಾಣಗಳಲ್ಲಿ ಈ ಜೋಕ್ ವೈರಲ್ ಆಗಿತ್ತು. ಮೊದಲೇ ಹೇಳಿದಂತೆ ಪರೀಕ್ಷೆಗೆ ಒಳಪಡುವ ಕಾರಿನ ಒಳಗಡೆ ಕ್ರಾಶ್‌ಡಮ್ಮಿ ಬೊಂಬೆಗಳು/ಮಾನವಾಕೃತಿಗಳನ್ನು ಕೂರಿಸಿರಲಾಗಿರುತ್ತದೆ.

ಈ ಜೋಕ್‌ನ ಜತೆ ಹಲವು ಚಿತ್ರಗಳು ಇವೆ. ಭಾರತದ ಕಾರಿನಲ್ಲಿ ಕುಳಿತುಕೊಳ್ಳಲು ಮಾನವಾಕೃತಿಗಳು ಹೆದರಿ ಓಡಿಹೋಗುತ್ತಿರುವ, ಸಿಬ್ಬಂದಿ ಅವನ್ನು ಎಳೆದುಕೊಂಡು ಬಂದು ಕಾರಿನೊಳಗೆ ತುರುಕುತ್ತಿರುವ ಸರಣಿ ಚಿತ್ರಗಳವು. ಆ ಚಿತ್ರಗಳ ಜತೆಗೆ ಒಂದು ಡಿಸ್ಕ್ಲೈಮರ್ ಇರುತ್ತಿತ್ತು. ಅದು ಇಂತಿದೆ: 'ಭಾರತದ ಕಾರುಗಳಲ್ಲಿ ಕೂರಲು ಮಾನವಾಕೃತಿಗಳ ಮನವೊಲಿಸುವಲ್ಲಿ ಎನ್‌ಸಿಎಪಿ ಸಿಬ್ಬಂದಿ ಯಶಸ್ವಿಯಾದರೆ ಭಾರತದ ಮತ್ತಷ್ಟು ಕಾರುಗಳ ಕ್ರಾಶ್ ಟೆಸ್ಟ್ ನಡೆಯಲಿದೆ'.

ಈಗ ಈ ಪರಿಸ್ಥಿತಿ ಬದಲಾಗಿದೆ. ಐರೋಪ್ಯ ಮತ್ತು ಅಮೆರಿಕನ್ ಕಂಪನಿಗಳ ಕಾರುಗಳಿಗಿಂತಲೂ ಸುರಕ್ಷಿತವಾದ ಕಾರುಗಳನ್ನು ಅಭಿವೃದ್ಧಿಪಡಿಸಿ ಭಾರತದ ಕಂಪನಿಗಳು ಮೇಲುಗೈ ಸಾಧಿಸಿವೆ. ಆದರೆ ಭಾರತದಲ್ಲಿ ಮಾರಾಟವಾಗುತ್ತಿರುವ ಜಪಾನ್, ಕೊರಿಯಾ ಮತ್ತು ಚೀನಾದ ಕಾರುಗಳಿಗೆ ಈ ಜೋಕ್ ಈಗಲೂ ಅನ್ವಯವಾಗುತ್ತದೆ.

ಮತ್ತು ಹೆಚ್ಚು ಮಾರಾಟವಾಗುವ ಮೊದಲ 50 ಕಾರುಗಳನ್ನು ಕ್ರಾಶ್ ಟೆಸ್ಟ್‌ಗೆ ಒಳಪಡಿಸಿದ ಮಹತ್ವದ ಮೈಲುಗಲ್ಲನ್ನು 'ಗ್ಲೋಬಲ್ ಎನ್‌ಸಿಎಪಿ' ಈಚೆಗಷ್ಟೇ ಮುಟ್ಟಿದೆ. ಇವುಗಳಲ್ಲಿ 10–15 ಕಾರುಗಳಷ್ಟೇ 1 ಮತ್ತು ಅದಕ್ಕಿಂತ ಹೆಚ್ಚು ಸ್ಟಾರ್‌ನ ರೇಟಿಂಗ್ ಪಡೆಯುವಲ್ಲಿ ಯಶಸ್ವಿಯಾಗಿವೆ. ಈಗ ಭಾರತದಲ್ಲಿ ಮಾರಾಟವಾಗುತ್ತಿರುವ ಕಾರುಗಳಲ್ಲಿ ಗರಿಷ್ಠ ಸುರಕ್ಷತೆಯ ಮೊದಲ 10 ಕಾರುಗಳಲ್ಲಿ, 10 ಕಾರುಗಳೂ ಭಾರತೀಯ ಕಂಪನಿಗಳದ್ದೇ ಆಗಿವೆ. ಅವುಗಳಲ್ಲಿ ಟಾಟಾ ಮೋಟರ್ಸ್ ಮತ್ತು ಮಹೀಂದ್ರಾ ಅಂಡ್ ಮಹೀಂದ್ರಾ ಪಾರಮ್ಯ ಮೆರೆದಿವೆ. ಜಪಾನ್, ಕೊರಿಯಾ, ಐರೋಪ್ಯ ಮತ್ತು ಅಮೆರಿಕನ್ ಕಂಪನಿಗಳ ಕಾರುಗಳು ಮೊದಲ 10 ಕಾರುಗಳ ಪಟ್ಟಿಯಲ್ಲಿ ಸ್ಥಾನವನ್ನೇ ಪಡೆದಿಲ್ಲ.

ಇದರ ಮಧ್ಯೆಯೇ 'ಭಾರತ್ ಎನ್‌ಸಿಎಪಿ' ಎಂಬ ಸಂಸ್ಥೆಯನ್ನು ಸ್ಥಾಪಿಸಲು ಕೇಂದ್ರ ರಸ್ತೆ ಸಾರಿಗೆ ಮತ್ತು ಹೆದ್ದಾರಿ ಸಚಿವಾಲಯವು ರೂಪುರೇಷೆ ಸಿದ್ಧಪಡಿಸಿದೆ. ಆದರೆ ದೇಶದ ದೊಡ್ಡ ಕಂಪನಿಗಳ ಲಾಬಿ ಮತ್ತು ಕೋವಿಡ್ ದುರಿತದ ಕಾರಣ 'ಭಾರತ್ ಎನ್‌ಸಿಎಪಿ' ಇನ್ನೂ ಜಾರಿಯಾಗಿಲ್ಲ. ಆದರೆ, ತಾವು ಕೊಳ್ಳುವ ಕಾರುಗಳು ಸುರಕ್ಷಿತವಾಗಿರಬೇಕು ಎಂಬ ಅಂಶವನ್ನು ಭಾರತೀಯ ಗ್ರಾಹಕರು ಗಂಭಿರವಾಗಿ ಪರಿಗಣಿಸಲು ಆರಂಭಿಸಿದ್ದಾರೆ. ಈ ಮನೋಭಾವ ದೇಶದ ಕಾರು ಮಾರುಕಟ್ಟೆಯನ್ನು ಬದಲಿಸುತ್ತಿದೆ. ಸುರಕ್ಷಿತ ಕಾರುಗಳನ್ನು ತಯಾರಿಸುತ್ತಿರುವ ಕಂಪನಿಗಳು ಮಾಸಿಕ ಮಾರಾಟ ಪಟ್ಟಿಯಲ್ಲಿ ಮೊದಲ ಸ್ಥಾನದತ್ತ ಏರುತ್ತಿವೆ. ಸುರಕ್ಷಿತವಲ್ಲದ ಕಾರುಗಳನ್ನು ತಯಾರಿಸುತ್ತಿರುವ ಕಂಪನಿಗಳ ಮಾರುಕಟ್ಟೆ ಪಾಲು ಪ್ರತಿ ತಿಂಗಳೂ ಕುಸಿಯುತ್ತಿದೆ. ಇದರ ಹಿಂದೆ 1980ರಲ್ಲಿ 'ಟಿಆರ್‌ಎಲ್' ತಂಡವು ಹಾಕಿದ್ದ ಶ್ರಮವಿದೆ.

### ಹೀಗೆ ನಡೆಯುತ್ತದೆ ಕ್ರಾಶ್ ಟೆಸ್ಟ್

ಮಾರುಕಟ್ಟೆಯಲ್ಲಿ ಲಭ್ಯವಿರುವ ಕಾರುಗಳನ್ನು ಯಾದೃಚ್ಛಿಕವಾಗಿ ಆಯ್ಕೆ ಮಾಡಿಕೊಂಡು ಕ್ರಾಶ್ ಟೆಸ್ಟ್‌ಗೆ ಒಳಪಡಿಸಲು ಕೆಲಸವನ್ನು 'ಗ್ಲೋಬಲ್ ಎನ್‌ಸಿಎಪಿ' ಮಾಡುತ್ತದೆ. ಇದಕ್ಕಾಗಿ ಜಿನಿವಾದಲ್ಲಿ ಒಂದು ದೊಡ್ಡ ಮತ್ತು ಅತ್ಯಾಧುನಿಕ ಪ್ರಯೋಗಾಲಯವನ್ನು